ಕರ್ನಾಟಕ ಸರ್ಕಾರ
ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರ ಕಛೇರಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಡಿ. ಸುಬ್ಬಯ್ಯ ರಸ್ತೆ, ಮೈಸೂರು-570 024
ದೂರವಾಣಿ ಸಂಖ್ಯೆ: 0821 – 2422208 ಇ-ಮೇಲ್ ವಿಳಾಸ: jdpi.edu.karmys@nic.in

*************************************************************************************************

# ಪ್ರಕಟಣೆ

2018-19ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ವರ್ಗಾವಣೆ ಸಂಬಂಧ ಮೈಸೂರು ವಿಭಾಗದ ಘಟಕದ ಹೊರಗಿನ ಪರಸ್ಪರ ವರ್ಗಾವಣೆ ಅಂತಿಮ ಆದ್ಯತಾ ಅಂಗೀಕೃತ ಪಟ್ಟಿಯನ್ನು **(ACCEPTED LIST)** ದಿನಾಂಕ 27-09-2019ರಂದು ಇಲಾಖಾ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಪ್ರಕಟಿಸಲಾಗಿದೆ. ಸದರಿ ಪಟ್ಟಿಯಲ್ಲಿನ ಮೈಸೂರು ವಿಭಾಗಕ್ಕೆ ಸಂಬಂಧಿಸಿದ ಶಿಕ್ಷಕರುಗಳಿಗೆ ಸ್ಥಳ ಆಯ್ಕೆಗಾಗಿ, ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿನಿರ್ದೇಶಕರ ಕಛೇರಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಡಿ. ಸುಬ್ಬಯ್ಯ ರಸ್ತೆ, ಮೈಸೂರು ಇಲ್ಲಿ ಈ ಕೆಳಕಂಡಂತೆ ಕೌನ್ಸಿಲಿಂಗ್ ನಡೆಸಲಾಗುವುದು.

| ಕ್ರ. ಸಂ. | ವೃಂದ | ಆದ್ಯತಾ ಕ್ರಮ ಸಂಖ್ಯೆ | ಕೌನ್ಸಿಲಿಂಗ್‌ಗೆ ಹಾಜರಾಗಬೇಕಾದ ದಿನಾಂಕ ಮತ್ತು ಸಮಯ |
|---|---|---|---|
| 01 | ಸರ್ಕಾರಿ ಪ್ರಾಥಮಿಕ ಶಾಲೆಯ ಸಹ ಶಿಕ್ಷಕರ ಘಟಕದ ಹೊರಗಿನ ಪರಸ್ಪರ ವರ್ಗಾವಣೆ ಕೌನ್ಸಿಲಿಂಗ್ | ಮೈಸೂರು ವಿಭಾಗಕ್ಕೆ ಸಂಬಂಧಿಸಿದ ಅಂತಿಮ ಆದ್ಯತಾ ಅಂಗೀಕೃತ ಪಟ್ಟಿಯ ಕ್ರ.ಸಂ.01 ರಿಂದ 53ರವರೆಗೆ | 31-10-2019 ಪೂರ್ವಾಹ್ನ 9-00 ಗಂಟೆಯಿಂದ |

ಆದ್ದರಿಂದ ಮೇಲ್ಕಂಡಂತೆ ಸಂಬಂಧಿಸಿದ ಶಿಕ್ಷಕರು ಸದರಿ ದಿನಾಂಕದಂದು ಸ್ಥಳ ಆಯ್ಕೆಗಾಗಿ ಈ ಕೆಳಕಂಡ ದಾಖಲೆಗಳೊಡನೆ ಕೌನ್ಸಿಲಿಂಗ್‌ಗೆ ಸಕಾಲದಲ್ಲಿ ಹಾಜರಿರಲು ಸೂಚಿಸಿದೆ.

1. ಸಕ್ಷಮ ಪ್ರಾಧಿಕಾರದಿಂದ ಪಡೆದ ಸೇವಾ ದೃಢೀಕರಣ ಪತ್ರ (ಫೋಟೋ ಸಹಿತ).
2. ಇದೇ ಮೊದಲನೇ ಬಾರಿಗೆ ಪರಸ್ಪರ ವರ್ಗಾವಣೆ ಪಡೆಯುತ್ತಿರುವುದು ಎಂಬುದಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕರಣ ಪತ್ರ.
3. ವರ್ಗಾವಣೆ ಅರ್ಜಿಯ ಪ್ರತಿ.
4. ಅನ್ವಯವಾಗುವ ಇತರೆ ದಾಖಲೆಗಳು.

(ಹೆಚ್.ಎನ್. ಗೀತಾಂಬ)
ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ
ಜಂಟಿನಿರ್ದೇಶಕರು ಮತ್ತು ವರ್ಗಾವಣಾ ಪ್ರಾಧಿಕಾರಿ,
ಕ.ಪ್ರೌ.ಶಿ.ಪ.ಮಂಡಳಿ, ಸಾ.ಶಿ.ಇಲಾಖೆ, ಮೈಸೂರು ವಿಭಾಗ, ಮೈಸೂರು.

JDPi-2/CN/E/G15 Transfer/Transfer 2019/Paper notification